ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ. ತಮ್ಮ ಉತ್ತರದಲ್ಲಿ ಕೊಟ್ಟಿರತಕ್ಕಂಥ ವಿವರ ಬಹುತಃ ಹಿಂದೆ ಅಚ್ಚಾಗಿದ್ದುದ್ದು ಇರಬೇಕು ಎಂದು ಕಾಣುತ್ತದೆ, ಸ್ಪೆಷಲ್ ತಹಶೀಲ್ದಾರ್ (ಫರ್ಸ್ಟ್ ಗ್ರೇಡ್)ರ ಒಂದು ಪೋಸ್ಟ್ ವೇಕೆಂಟ್ ಇದೆ ಎಂದು ಹೇಳಿದ್ದೀರಿ. ಎರಡು ಪೋಸ್ಟ್ ವೇಕೆಂಟ್ ಇದೆ. ಬಂಟವಾಳ ತಾಲ್ಲೂಕಿನ ಎರಡು ಟ್ರಿಬ್ಯುನಲ್‌ಗಳಿಗೂ ಅವರನ್ನು ನೇಮಕ ಮಾಡಿಲ್ಲ. ಈ ಪೋಸ್ಟ್‌ಗಳನ್ನು ತಾವು ಈ ಕೂಡಲೇ ಭರ್ತಿ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾವು ಅವರನ್ನು ಸೆಲೆಕ್ಟ್ ಮಾಡಿ ಕಳಿಸಿದ್ದೇವೆ. ಅವರು ಅಲ್ಲಿಗೆ ಹೋಗಿ ರಿಪೋರ್ಟ್ ಮಾಡಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಮೊನ್ನೆ ತನಕ ಒಬ್ಬರು ತಹಶೀಲ್ದಾರ್ ಇದ್ದರು, ೮-೧೦ ದಿವಸಗಳ ಹಿಂದೆ ಒಬ್ಬರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೇವೆ. ಅವರೇನಾದರೂ ಅಲ್ಲಿಗೆ ಹಾಜರಾಗದಿದ್ದರೆ ಅದನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ತಮ್ಮ ಉತ್ತರದಲ್ಲಿ ಕೊಟ್ಟಿರುವ ಹಾಗೆ ೧೯೭೮ನೇ ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಟ್ರಿಬ್ಯುನಲ್‌ಗಳಲ್ಲಿ ಕ್ರಮವಾಗಿ ೩೨೬, ೭೬೫, ೬೫೨ ಹಾಗೂ ೩೮೯ ತುರ್ತು ಕಟ್ಟಲೆಗಳು ಮುಕ್ತಾಯಕ್ಕೆ ಬಂದಿವೆ. ಬಹಳಷ್ಟು ಕೆಲಸ ನಡೆದಿದೆ. ಆದರೆ ಅಲ್ಲಿರತಕ್ಕಂಥ ಇಬ್ಬರಲ್ಲೂ ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು; ಅವರಲ್ಲಿ ಒಬ್ಬರು ರಿಟೈರ್ ಆಗಿದ್ದಾರೆ, ಇನ್ನೊಬ್ಬರು ಖಾಯಿಲೆ ಬಿದ್ದಿದ್ದಾರೆ. ಒಬ್ಬರು ಒಂದು ಟ್ರಿಬ್ಯುನಲ್‌ಗೆ ಮಾತ್ರ ಚೇರ್‌ಮನ್ ಆಗಿದ್ದಾರೆ. ಅವರು ಹೊಸಬರು. ಹೀಗಾಗಿ ೨ ತಿಂಗಳಿನಿಂದ ಕೆಲಸಗಳು ನಿಧಾನವಾಗುತ್ತಿದೆ. ಆದ್ದರಿಂದ ತಾವು ಇದನ್ನು ಪರಿಶೀಲನೆ ಮಾಡಿ ಅನುಭವಸ್ಥ ಅಧಿಕಾರಿಗಳನ್ನು ಈ ಎರಡೂ ಟ್ರಿಬ್ಯುನಲ್‌ಗಳಲ್ಲಿ ಹಾಕಿ ಈ ಕೆಲಸ ಸರಾಗವಾಗಿ ನಡೆಯುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎ. ಮೋಹಿದ್ದೀನ್.—ಸ್ವಾಮಿ. ಈ ಸಮಸ್ಯೆ ಇರುವುದು ಬಂಟವಾಳಕ್ಕೆ ಮಾತ್ರವಲ್ಲ ಇಡೀ ನಮ್ಮ ಜಿಲ್ಲೆಗೇ ಇದೆ. ಟ್ರಿಬ್ಯುನಲ್‌ಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳು ಖಾಲಿ ಇವೆ. ಸಾಕಷ್ಟು ಸಂಖ್ಯೆಯ ಅರ್ಜಿಗಳು ಇತ್ಯರ್ಥವಾಗದೇ ಇವೆ ಅಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ಸಾಕಷ್ಟು ಸಂಖ್ಯೆಯ ಅರ್ಜಿಗಳನ್ನು ತೀರ್ಮಾನ ಮಾಡುವುದಕ್ಕೆ ತೊಂದರೆಯಾಗಿದೆ. ಎಲ್ಲೆಲ್ಲಿ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳು ಖಾಲಿ ಇವೆ, ಎಲ್ಲೆಲ್ಲಿಗೆ ಸೂಪರ್‌ವೈಸರ್‌ಗಳು, ಸರ್ವೇಯರ್‌ಗಳು ಅಕಾಗಿದ್ದಾರೆ, ಭೂ ನ್ಯಾಯ ಮಂಡಳಿಗಳಿಗೆ ಯಾವ ಯಾವ ಸಿಬ್ಬಂದಿಗಳ ಅವಶ್ಯಕತೆ ಇದೆಯೋ ಸದನ್ನೆಲ್ಲಾ ಒಗ್ಗಿಸಿಕೊಟ್ಟು ಅತಿ ಶೀಘ್ರವಾಗಿ ಬಾಕಿ ಉಳಿದಿರುವಂಥ ಅರ್ಜಿಗಳನ್ನು ಇತ್ಯರ್ಥಗೊಳಿಸುವುದಕ್ಕೆ ಸಹಾಯ ಮಾಡುತ್ತೀರಾ ? ಖಾಲಿ ಇರುವಂಥ ಹುದ್ದೆಗಳನ್ನು ಆದಷ್ಟು ಶೀಘ್ರವಾಗಿ ಭರ್ತಿ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :— ಅಸಿಸ್ಟೆಂಟ್ ಕಮೀಷನರ್ ಮತ್ತು ತಹಶೀಲ್ದಾರರ ಅಭಾವದಿಂದ ಆ ಕೆಲಸಗಳಲ್ಲಿ ಸ್ವಲ್ಪ ತಡವಾಗಿದೆ. ನಾವು ಎಲೆಲ್ಲಿ ಹುದ್ದೆಗಳು ಖಾಲಿ ಆಗಿವೆ ಅಲ್ಲಲ್ಲಿ ಅಧಿಕಾರಿಗಳನ್ನು ವರ್ಗ ಮಾಡಿದ್ದೇವೆ. ಈ ಅಭಾವ ಶೀಘ್ರದಲ್ಲೇ ಕೊನೇಯಾವೀತು ಎಂದು ನನ್ನ ಭಾವನೆ.

ಶ್ರೀ ಕೆ. ರಾಮಭಟ್ :— ಸ್ವಾಮಿ, ಅಸಿಸ್ಟೆಂಟ್ ಕಮಿಷನರ್ಸ್ ಮತ್ತು ತಹಶೀಲ್ದಾರಗಳು ಇಂತಹ ತಾರೀಖಿಗೆ ರಿಟೈರ್ ಆಗುತ್ತಾರೆ ಎಂದು ಕೆಲವು ಕಡೆಗಳಲ್ಲಿ ಗೊತ್ತಿರುತ್ತದೆ. ಅವರು ರಿಟೈರ್ ಆಗಿ ೩ ತಿಂಗಳಾಗಲು ಕಳೆದ ಮೇಲೆ ಆಲೋಚನೆ ಮಾಡಿ ಅಲ್ಲಿ ಅವರನ್ನು ನೇಮಕ ಮಾಡುತ್ತಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಕಡೆ ಅಧ್ಯಕ್ಷರುಗಳೇ ಇಲ್ಲ. ಇದರಿಂದ ಕೆಲಸಗಳು ನಿಧಾನವಾಗುತ್ತಿವೆ. ಆದ್ದರಿಂದ ನಾನು ಸಲಹೆ ಕೊಡುವುದೇನೆಂದರೆ ಅವರು ರಿಟೈರ್ ಆಗುವ ತಾರೀಖಿಗೆ ಮೊದಲೇ ಅವರನ್ನು ನೇಮಕ ಮಾಡುವ ವ್ಯವಸ್ಥೆ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಟ್ರಿಬ್ಯುನಲ್‌ಗಳಿಗೆ ಸಾಕಷ್ಟು ಸಿಬ್ಬಂದಿವರ್ಗವವರನ್ನು. ಟೈಪಿಸ್ಟ್‌ರನ್ನ ಕೊಡುವುದಿಲ್ಲ. ನಮ್ಮ ಮಂಗಳೂರು, ಪುತ್ತೂರು ಗಳ ಎಗಡನೇ ಟ್ರಿಬ್ಯುನಲ್‌ಗಳಿಗೆ ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟಿಲ್ಲ. ಈ ಕಾರಣದಿಂದ ತಾವು ಆದಷ್ಟು ಬೇಗನೆ ಈ ಕೆಲಸವನ್ನು ಮಾಡುತ್ತಿರೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :— ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ.

Gobar Gas plants installed in the State

741 SRI K. H. HANUME GOWDA (Hassan) :— Will the Minister for Industries and Commerce be pleased to state :—

(a) how many Gobar Gas Plants are installed by the Karnataka State Khadi and Village Industries Board, in various districts in the State ;

(b) what are the uses of Gobar Gas Plants ;

(c) what is the estimated cost of each Gobar Gas Plant ;

(d) whether the Government give subsidy for the expenditure incurred. if so, what is the quantum ;

(e) what are the steps taken by the Govt, to establish more number of Gobar Gas Plants ?

SRI H. C. SRIKANTAIAH (Minister for Municipal Administration) [on behalf of SRI AZEEZSAIT (Minister for Induatries and Commerce]:—

(a) Since October 1976, to the end of December 1978, 4258 Gobar Gas Plants are installed in the State by the Karnataka State Khadi and Village Industries Board, District wise details are given in Ann exure I is placed on the Table.**

(b) —

1. The residential slush mixed with water can be used as manure.

2. The gas can be used for cooking and lighting.

3. It can also be used in oil engines for lifting water through pumpsets.

(c) The estimated cost of Gobar Gas Plant ranges from about Rs. 2,332 to Rs. 58,900 depending on its capacity.

(d) The Government is providing 20 per cent subsidy on the estimated cost of each Gobar Gas Plant.

2. 25 per cent subsidy is allowed to small and Marginal farmers for Gobar Gas Plants of capacities ranging from 60 cft. to 100 cft.

3. 50 per cent of subsidy will be paid in the notified hill tracts.

(e) During 1978—79, the Government of India have assured that they would pay subsidy for 5,000 Gobar Gas Plants to the Khadi and Village Industries Board through the State Government.

**Copy placed in the Karnataka Leglisature Library vide No. 2 dated 21-9-1979.

The State Government has taken the following steps ,-

1. Programme has been drawn up for financing these plants through Commercial Banks and Co-operative Banks which in turn get refinancing facility from the Agricultural Refinance and Development Corporation.

2. Grant has been given to the Khadi and Village Industries Board for employing staff at various levels for implementing the programme.

3. The Government have also constituted a State Level Review Committee under the Chairmanship of the Development Commissioner for periodical review and followup action.

4. Arrangements have been made for the Board to issue letters of intent to small industrialists who wish to fabricate Gobar Gas Plants.

5. Arrangements are made to supply raw materials like M. S. Sheets and Plants to the approved fabricators though Karnataka Small Industries Development Corporation.

6. The Deputy Commissioners have been asked to supply, through the Block Development Officers cement required for the installation of Gobar Gas Plants.

ಶ್ರೀ ಕೆ. ಎಚ್. ಪಸುಮೇಗೌಡ.—ಸ್ವಾಮಿ, ಕಳೆದ ವರ್ಷದತನಕ ಕೇಂದ್ರಸರ್ಕಾರದವರು ರಾಜ್ಯದಲ್ಲಿ ಗೋಬರ್‌ಗ್ಯಾಸ್ ಪ್ಲಾಂಟ್‌ಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ೧೬ ಲಕ್ಷ ರೂಪಾಯಿಗಳ ಸಹಾಯ ಧನವನ್ನು ರಾಜ್ಯಸರ್ಕಾರಕ್ಕೆ ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ಈ ೧೬ ಲಕ್ಷ ರೂಪಾಯಿಗಳ ಹಣವನ್ನು ರಾಜ್ಯದ ಬಾಡಿ ಮತ್ತು ಗ್ರಾಮೋದ್ಯೋಗ ಮಂಡಲಿಯವರಿಗೆ ಇದುವರೆಗೂ ಕೊಡದೇ ಇರುವುದಕ್ಕೆ ಕಾರಣವೇನು ?

†ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸ್ವಾಮಿ, ದಿನಾಂಕ ೧೩ನೇ ಸೆಪ್ಟೆಂಬರ್ ೧೯೭೮ ರಂದು ಸೆಂಟ್ರಲ್ ಗೌರ್ನಮೆಂಟ್‌ನವರು ಸಬ್ಸಿಡಿ ರೂಪದಲ್ಲಿ ೧೬ ಲಕ್ಷ ರೂಪಾಯಿಗಳನ್ನು ಹಂಚುವುದಕ್ಕೆ ಹಣವನ್ನು ರಿಲೀಸ್ ಮಾಡಿದರು. ಅದು ಸ್ಟೇಟ್ ಗೌರ್ನಮೆಂಟ್ ಬಜೆಟ್‌ಗೆ ಬಂದು ರೀಅಪ್ರೋಪ್ರಿಯೇಷನ್ ಆಗಿ ೧೯೭೯ರ ಫೆಬ್ರುವರಿ, ಮಾರ್ಚ್ ಅಪ್ಪಿರಿನೊಳಗೆ ಪೂರ್ಣವಾಗಿ ಹಂಚಿಕೆಯಾಗಿದೆ.

ಶ್ರೀ ಕೆ. ಎಚ್. ಪಸುಮೇಗೌಡ.—ಸ್ವಾಮಿ, ನನಗೆ ತಿಳಿದಿರುವ ಪ್ರಕಾರ ೨ ಲಕ್ಷ ೮೩ ಸಾವಿರ ರೂಪಾಯಿಗಳಷ್ಟು ಹಣವನ್ನು ರಾಜ್ಯಸರ್ಕಾರದವರು ರಿಲೀಸ್ ಮಾಡಿಲ್ಲ ಎಂದು ಕೇಳಿದ್ದೇನೆ. ಮಾನ್ಯ ಸಚಿವರು ಇದನ್ನು ವೆರಿಫೈ ಮಾಡಿ ಉತ್ತರ ಹೇಳಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ನಾವು ೧೬ ಲಕ್ಷ ರೂಪಾಯಿಗಳನ್ನು ಪೂರ್ಣವಾಗಿ ರಿಲೀಸ್ ಮಾಡಿದ್ದೇವೆ. ಅದನ್ನು ಸಬ್ಸಿಡಿ ರೂಪದಲ್ಲಿ ಕೊಟ್ಟಿದ್ದೇವೆ. ಕೇಂದ್ರಸರ್ಕಾರದವರು ಕೊಟ್ಟಿರತಕ್ಕಂಥ ಯಾವುದೇ ಹಣ ಸಪ ನಮ್ಮಲ್ಲಿ ಮಿಕ್ಕಿಲ್ಲ.

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ತಮ್ಮ ಉತ್ತರದಲ್ಲಿ ಕೇಳಿದ ೨೦ರಷ್ಟು ಸಹಾಯ ಧನವನ್ನು ಕೇಂದ್ರದವರು ಕೊಡುತ್ತಾರೆ ಎಂದು ಹೇಳಿದ್ದೀರಿ. ನಂತರ ಮುಂದಿನ ಪ್ರಶ್ನೆಗೆ ಉತ್ತರ ಕೊಡುತ್ತಾ ಕೇಂದ್ರಸರ್ಕಾರದವರು ೫೦೦೦ ಗೋಬರ್‌ಗ್ಯಾಸ್ ಪ್ಲಾಂಟುಗಳಿಗೆ ಸಹಾಯ ಧನವನ್ನು ಕೊಡಲು ಆಜ್ಞಾಪನೆ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಕೇಂದ್ರಸರ್ಕಾರದವರು ಕೊಡತಕ್ಕಂಥ ಧನ ಸಹಾಯ ೨೦ ಪರ್ಸೆಂಟ್‌ನೊಳಗೆ ಸೇರಿದೆಯೋ ಅಥವಾ ಈ ೨೦ ಪರ್ಸೆಂಟ್‌ಗೆ ಮೀರಿ ಸಹಾಯ ಕೊಡುತ್ತಾರೆಯೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೇಂದ್ರಸರ್ಕಾರದವರು ಕೊಡುವಂತಹ ೨೦ ಪರ್ಸೆಂಟ್ ಸಬ್ಸಿಡಿ ಹಣವನ್ನು ಸ್ಮಾಲ್ ಮಾರ್ಜಿನಲ್ ಫಾರ್ಮರ್ಸ್‌ಗೆ ಪೂರ್ತಿಯಾಗಿ ಕೊಡುತ್ತೇವೆ.

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ನಾನು ಹೇಳುವುದೇನೆಂದರೆ ತಾವು, (ಈ)ಯಲ್ಲಿ ಒಂದನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಆಂದಾಜು ಖರ್ಚಿನ ಮೊಬಲಗಿನ ಶೇಕಡಾ ೨೦ರಷ್ಟು ಸಹಾಯ ವನ್ನು ಸರ್ಕಾರದವರು ಕೊಡುತ್ತಾರೆ. ಮತ್ತು (ಉ) ಪ್ರಶ್ನೆಗೆ, ಕೇಂದ್ರಸರ್ಕಾರದವರು ೧೯೭೮–೭೯ನೇ ಸಾಲಿನಲ್ಲಿ ಕರ್ನಾಟಕ ರಾಜ್ಯಸರ್ಕಾರದ ಮೂಲಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಸ್ಥಾಪಿಸಬಹುದಾದ ೫೦೦೦ ಗೋಬರ್‌ಗ್ಯಾಸ್ ಪ್ಲಾಂಟುಗಳಿಗೆ ಸಹಾಯ ಧನವನ್ನು ಕೊಡಲು ಆಶ್ವಾಸನೆ ಕೊಟ್ಟಿದ್ದಾರೆ. ಎಂದು ಹೇಳಿದ್ದೀರಿ. ಅಂದರೆ ಕೇಂದ್ರಸರ್ಕಾರದವರು ಕೊಡತಕ್ಕಂಥ ಸಹಾಯ ಧನ ೨೦ ಪರ್ಸೆಂಟ್‌ನೊಳಗೆ ಸೇರಿದೆಯೋ ಅಥವಾ ಈ ೨೦ ಪರ್ಸೆಂಟ್‌ಗಿಂತ ಅಧಿಕವಾಗಿ ಕೊಡುತ್ತಾರೆಯೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೇಂದ್ರಸರ್ಕಾರದವರು ಕೊಡತಕ್ಕಂಥ ಸಬ್ಸಿಡಿ ಹಣವನ್ನು ಪೂರ್ಣವಾಗಿ ಕೊಡುತ್ತಾರೆ, ಅದಕ್ಕಿಂತ ಜಾಸ್ತಿ ಕೊಡುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ವರ್ಷದವರೆಗೆ ಕೇಂದ್ರಸರ್ಕಾರದವರು ಗೋಬರ್‌ಗ್ಯಾಸ್ ಪ್ಲಾಂಟ್‌ಗಳಿಗೆ ಕೊಡುತ್ತಿದ್ದ ಸಹಾಯಧನವನ್ನು ನಿಲ್ಲಿಸಿ, ಆ ಸಹಾಯಧನವನ್ನು ಈ ವರ್ಷದಿಂದ ರಾಜ್ಯ ಸರ್ಕಾರಗಳೇ ಕೊಡಬೇಕೆಂದು ಆದೇಶವಿತ್ತಿರುವುದಾಗಿ ತಿಳಿದುಬಂದಿದೆ. ಆದುದರಿಂದ, ಈ ವರ್ಷ ಗೋಬರ್ ಗ್ಯಾಸ್ ಪ್ಲಾಂಟುಗಳಿಗೆ ಸಹಾಯಧನ ನೀಡಲು ನಮ್ಮ ರಾಜ್ಯ ಸರ್ಕಾರದವರು ಎಷ್ಟು ಹಣವನ್ನು ಮಂಜೂರು ಮಾಡಿರುವರು ಮತ್ತು ಅದರಲ್ಲಿ ಎಷ್ಟು ಹಣವನ್ನು ಖಾದಿ ಮಂಡಲಿಗೆ ಬಿಡುಗಡೆ ಮಾಡ ಲಾಗಿದೆ ಎಂಬುದನ್ನು ತಿಳಿಸುವರೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಖಾದಿ ಮಂಡಲಿಗೆ ಯಾವ ಹಣವನ್ನೂ ಬಿಡುಗಡೆ ಮಾಡಿಲ್ಲ. ಗೋಬರ್ ಗ್ಯಾಸ್ ಪ್ಲಾಂಟ್‌ಗಳಿಗೆ ಸಹಾಯಧನವನ್ನು ನಾವು ಕೊಡುವುದಿಲ್ಲ, ಇನ್ನು ಮುಂದೆ ರಾಜ್ಯ ಸರ್ಕಾರಗಳವರೇ ಕೊಡಬೇಕೆಂದು ಕೇಂದ್ರ ಸರ್ಕಾರದವರು ಆದೇಶ ವಿತ್ತಿದ್ದರೆ, ಅದನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಕೆ. ಎಚ್. ಹನುಮೇಗೌಡ.—ಗೋಬರ್‌ಗ್ಯಾಸ್ ಪ್ಲಾಂಟುಗಳಿಗೆ ಮೂವತ್ತೈದು ಲಕ್ಷ ರೂಪಾಯಿಗಳಷ್ಟು ಹಣವನ್ನು ರಾಜ್ಯ ಸರ್ಕಾರದವರು ಸಹಾಯಧನವನ್ನಾಗಿ ಇಡಬೇಕೆಂದು ಸಮಿತಿಯ ವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರೂ ಕೊಟ್ಟಿಲ್ಲ. ಇದರಿಂದಾಗಿ, ಈ ಪ್ಲಾಂಟುಗಳ ಕೆಲಸ ಸ್ಥಗಿತ ಗೊಂಡಿದೆ. ಪ್ಲಾಂಟುಗಳಿಗೆ ಧನ ಸಹಾಯವನ್ನು ಕೊಡದೆ ಇರುವುದಕ್ಕೆ ಕಾರಣವೇನು ? ಮತ್ತು ಅವು ಗಳಿಗೆ ಆದಷ್ಟು ಬೇಗನೆ ಧನ ಸಹಾಯವನ್ನು ನೀಡಲಾಗುವುದೆ ? ಅಲ್ಲದೆ ಜೈನಾ ಮಾದರಿಯ ಗೋಬರ್ ಗ್ಯಾಸ್ ಪ್ಲಾಂಟುಗಳನ್ನು ನಿರ್ಮಿಸಲು ಮೂರು ಸಾವಿರ ರೂಪಾಯಿಗಳಾಗುತ್ತವೆ ಮತ್ತು ಅವು ಹೆಚ್ಚು ಕಾಲ ಬಾಳಿಕೆ ಬರುವುದಲ್ಲದೆ, ಕೈಪಾಸಿಟಿಯೂ ಇದರಷ್ಟೇ ಇರುತ್ತದೆ. ನಮ್ಮ ರಾಜ್ಯದಲ್ಲಿ ನಿರ್ಮಿಸುತ್ತಿರುವ ಗೋಬರ್ ಗ್ಯಾಸ್ ಪ್ಲಾಂಟ್ ಒಂದಕ್ಕೆ ವೆಚ್ಚವಾಗುತ್ತಿರುವ ಹಣದಲ್ಲಿ ಜೈನಾ ಮಾದರಿಯ ಮೂರು ಗೋಬರ ಗ್ಯಾಸ್ ಪ್ಲಾಂಟುಗಳನ್ನು ನಿರ್ಮಿಸಬಹುದಾಗಿದೆ. ಆದುದರಿಂದ, ಜೈನಾ ಮಾದರಿಯ ಗೋಬರ್ ಗ್ಯಾಸ್ ಪ್ಲಾಂಟುಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುವರೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ತೀವ್ರವಾಗಿ ಪರಿಶೀಲಿಸಲಾಗುವುದು.

Limestone Quarries in Gulbarga District

728 SRI PRABHAKR R. TELKER (Chitapur)–Will the Chief Minister be pleased to state :—

(a) the total area of lime quarries in Gulbarga Disttric (Particulars of each taluk be separately furnished) ;

(b) the number of limestone quarries in operation (Particulars of each Taluk be furnished);

(c) the royalty and the other revenues received by the Govt. from these limestone quarries (Particulars of each taluk be furnished)